# ಕೊಡಗು: ನರ್ಸರಿಗಳ ಬಿನ್ನಾಣ!

**ಕೊಡವರು ಯಾರೇ ಇರಲಿ, ಅವರ ಮನೆಯ ಮುಂದೊಂದು ಹೂವಿನ ತೋಟ ಇರಲೇಬೇಕು. ಆದನ್ನು ಚೆನ್ನಾಗಿ ಬೆಳೆಸುವ ಕಲೆಯೂ ಅವರಿಗೆ ಗೊತ್ತು.**

ಚಿತ್ರ, ಬರಹ:
**ಸೌಖ್ಯ ಮೋಹನ್**





**ಕೊ**ಡಗು ಎಂದ ತಕ್ಷಣ ನಮ್ಮ ಮನಸನ್ನು ಆಕರ್ಷಿಸುವುದು ಅಲ್ಲಿನ ಪ್ರಕೃತಿ. ಕಾಫಿ ತೋಟದ ಹೂವಿನ ಕಂಪು, ಜಡಿಮಳೆ, ಮಂಜು ಮುಸುಕಿದ ಕಿರಿದಾದ ದಾರಿ, ಚುಮು–ಚುಮು ಚಳಿ, ಎತ್ತ ನೋಡಿದರೂ ಹಸಿರು, ಗುಡ್ಡದ ಇಳಿಜಾರಿನಲ್ಲೇ ಮನೆಗಳು! ಜತೆಗೆ ಅಲ್ಲಿನ ವಿಶಿಷ್ಟ ಸಂಸ್ಕೃತಿ– ಆಹಾರ, ಧಿರಿಸು. ಕೊಡಗಿನ ಇನ್ನೊಂದು ವಿಶೇಷವೆಂದರೆ ಕೊಡವರ ಮನೆಯ ಮುಂದಿನ ಹೂದೋಟ. ಯಾರ ಮನೆಯ ಮುಂದೆ ನೋಡಿದರೂ ಆಂಥೋರಿಯಮ್, ವಾಟರ್ ಲಿಲ್ಲಿ, ಬಣ್ಣದ ದಾಸವಾಳ, ಆರ್ಕಿಡ್ ಇತ್ಯಾದಿ. ಅವರು ತೋಟವನ್ನು ನಿರ್ವಹಣೆ ಮಾಡುವ ರೀತಿಯೂ ಅದ್ಭುತ.

ಕೊಡಗಿನ ವಿರಾಜಪೇಟೆ ತಾಲ್ಲೂಕಿನ ಎರಡು ಚಿಕ್ಕ ಪೇಟೆಗಳಾದ ಗೋಣಿಕೊಪ್ಪ ಮತ್ತು ಪೊನ್ನಂಪೇಟೆಗಳ ಮಧ್ಯ ಇರುವ ಅಂತರ ಕೇವಲ ನಾಲ್ಕು ಕಿಲೋಮೀಟರ್. ಈ ನಾಲ್ಕು ಕಿಲೋಮೀಟರ್ ಅಂತರದಲ್ಲಿ 6 ನರ್ಸರಿಗಳಿವೆ! ಯಾವ್ಯಾವ ಗಿಡಗಳಿಗೆ ಬೇಡಿಕೆ ಇದೆ ಎಂಬ ಕುತೂಹಲದಿಂದ ನೆಲ್ಲಿತ್ತಾಯ ಕುಟುಂಬದ ಕಿಸಾನ್ ಎಂಬ ನರ್ಸರಿಗೆ ಭೇಟಿ ಇತ್ತಾಗ ಸಿಕ್ಕ ಮಾಹಿತಿಯೇ ಈ ಲೇಖನಕ್ಕೆ ಪ್ರೇರಣೆ.

ಸುಮಾರು 25 ವರ್ಷಗಳ ಹಿಂದೆ ಪ್ರಾರಂಭ ಮಾಡಿದ ಈ ನರ್ಸರಿಯಲ್ಲಿ ಕೇವಲ ಹೂವುಗಳಷ್ಟೇ ಅಲ್ಲ, ವಿವಿಧ ರೀತಿಯ ಹಣ್ಣು, ಸುಗಂಧ, ಔಷಧೀಯ ಮತ್ತು ಸಾಂಬಾರ ಸಸ್ಯಗಳೂ ಲಭ್ಯ. ಕೇವಲ ಕೊಡಗಿನ ಸ್ಥಳಗಳಿಗೊಂದೇ ಅಲ್ಲ, ಪಕ್ಕದ ಜಿಲ್ಲೆಗಳಾದ ಹಾಸನ, ಚಿಕ್ಕಮಗಳೂರು, ಶಿವಮೊಗ್ಗಕ್ಕೂ, ಜೊತೆಗೆ ಕೇರಳ, ತಮಿಳುನಾಡು ರಾಜ್ಯಗಳಿಗೂ ಈ ನರ್ಸರಿಯಿಂದ ಗಿಡಗಳು ಹೋಗುತ್ತವೆ. ಥಾಯ್ಲೆಂಡ್‌ನಿಂದ ತಂದ ನೆಕೂರ, ಡೆಂಡ್ರೋಬಿಯಂ, ಪೆಲೆನೊಸಿಬ್ಬ ಮುಂತಾದ ಆರ್ಕಿಡ್‌ಗಳಿವೆ. ಇವುಗಳ ಬೆಲೆ ಸುಮಾರು 250 ರೂಪಾಯಿಯಿಂದ 1500ರವರೆಗೂ ಇದೆ.

(8ನೇ ಪುಟ ನೋಡಿ)

